ಸಿ.ಸಿ .ನಂ.34/2023 ಪಿಡಬ್ಲೂಃ 1

ದಿನಾಂಕಃ 05-12-2023 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣೀಕರಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ ಆರೋಪಿಯ ಪರವಾಗಿಃ ಶ್ರೀ ಎಸ್ ಯು ಎ ವಕೀಲರಿಂದಃ**

12. ನಾನು ಯಾವ ಯಾವ ದಿನಾಂಕಗಳಂದು ಯಾವ ಯಾವ ಪಾಳಿಯಲ್ಲಿ ಕೆಲಸ ಮಾಡಿರುತ್ತೇನೆ ಎಂಬ ಬಗ್ಗೆ ನಮ್ಮ ಕಂಪನಿಗಳಲ್ಲಿ ದಾಖಲೆಗಳು ಇವೆ. ಆರೋಪಿಯು ನನ್ನ ಹತ್ತಿರ ಹಣ ಕೇಳಿದ್ದರು ಎಂದು ಹೇಳಿದ ಪೂರ್ವದಲ್ಲಿ ಅವರು ನನ್ನನ್ನು 3 ರಿಂದ 4 ಸಲ ಫೋನ್ ಮುಖಾಂತರ ಸಂಪರ್ಕಿಸಿರುತ್ತಾರೆ. ಆರೋಪಿಯು ನನ್ನ ಹತ್ತಿರ ಹಣ ಕೇಳಿದ್ದರು ಎಂದು ಹೇಳಿದ ಪೂರ್ವದಲ್ಲಿ ಅವರು ನನ್ನನ್ನು ಸುಮಾರು ಎರಡು ಸಲ ಭೇಟಿ ಮಾಡಿರಬಹುದು. ಆ ರೀತಿ ಆರೋಪಿಯು ನನ್ನನ್ನು ಯಾವ ದಿನಾಂಕದಂದು ಯಾವ ಸ್ಥಳದಲ್ಲಿ ಭೇಟಿ ಮಾಡಿರುತ್ತಾರೆ ಎಂದು ನನಗೆ ಹೇಳಲು ಆಗುವುದಿಲ್ಲ ಎಂದರೆ ಸರಿ . ಆರೋಪಿಯು ನನ್ನನ್ನು ನನ್ನ ಮಾವನ ಮನೆಯಲ್ಲಿ ಪ್ರಥಮ ಬಾರಿಗೆ ಭೇಟಿ ಮಾಡಿದಾಗ ನನ್ನ ಮಾವನ ಮನೆಯಲ್ಲಿ ಲಕ್ಷ್ಮೀ ಪೂಜೆ ಇತ್ತು. ಆ ಸಮಯದಲ್ಲಿ ಆರೋಪಿಯು ಎಲ್ಲಿ ಕೆಲಸ ಮಾಡುತ್ತಿದ್ದರು ಎಂದು ನನಗೆ ಗೊತ್ತಿಲ್ಲ. ನಾನು ಆರೋಪಿಗೆ ಹಣ ಕೊಟ್ಟಿದ್ದೆನು ಎಂದು ಹೇಳಿದ ದಿನಾಂಕಂದು ಅವರು ಹೊನ್ನಾವರ ಕೋರ್ಟಿನಲ್ಲಿ ಕೆಲಸ ಮಾಡುತ್ತಿರಬಹುದು, ನನಗೆ ಸರಿಯಾಗಿ ಗೊತ್ತಿಲ್ಲ. ಸಿಮ್ಲಾ ಐಸ್ ಕ್ರೀಮ್ ಅಂಗಡಿಯಲ್ಲಿ ಬಹಳ ಜನ ಇರುತ್ತಾರೆ ಎಂದರೆ ಸರಿಯಲ್ಲ, ಸದ್ರಿ ಐಸ್ ಕ್ರೀಮ್ ಪಾರ್ಲರ್ ನ ಮೇಲ್ಗಡೆ ಕ್ಯಾಬಿನ್ ಇದೆ ಎಂದು ನುಡಿಯುತ್ತಾರೆ. ನನ್ನ ಪ್ರತಿಪಾದನೆಯ ಪ್ರಕಾರ ನಾನು ಆರೋಪಿಗೆ ಹಣವನ್ನು ಕೊಟ್ಟಿದ್ದೆನು ಎಂದು ಹೇಳಿರುವುದನ್ನು ಯಾರೂ ಸಹ ನೋಡಿರುವುದಿಲ್ಲ.

13. ನಾನು ಆರೋಪಿಗೆ ಹಣ ಕೊಟ್ಟಿದ್ದೆನು ಎಂದು ಹಣ ಕೊಟ್ಟ ದಿನಾಂಕ ಹಾಗೂ ಸ್ಥಳವನ್ನು ಡೈರಿಯಲ್ಲಿ ಬರೆದಿಟ್ಟಿರುವುದಿಲ್ಲ. ನಾನು ಆರೋಪಿಗೆ ಹಣ ಕೊಟ್ಟಿದ್ದೆನು ಎಂದು ಹೇಳಿದ ಸಂದರ್ಭದಲ್ಲಿ ನನಗೆ ಸ್ಟೇಟ್ ಬ್ಯಾಂಕ್ ಆಪ್ ಇಂಡಿಯಾ ಮತ್ತು ಹೆಚ್ ಡಿ ಎಫ್ ಸಿ ಬ್ಯಾಂಕಿನಲ್ಲಿ ಖಾತೆ ಇತ್ತು . ಆ

ಪಿಡಬ್ಲೂಃ 1

ಸಂದರ್ಭದಲ್ಲಿ ನನ್ನ ತಂದೆಯ ಖಾತೆ ಸ್ಟೇಟ್ ಬ್ಯಾಂಕ್ ಆಪ್ ಇಂಡಿಯಾದಲ್ಲಿ ಇತ್ತು. ಆ ಸಂದರ್ಭದಲ್ಲಿ ನನ್ನ ಹೆಂಡತಿಯ ಖಾತೆ ಯಾವ ಬ್ಯಾಂಕಿನಲ್ಲಿ ಇತ್ತು ಎಂದು ನನಗೆ ನೆನಪಿಲ್ಲ . ಆರೋಪಿಗೆ ಹಣ ಕೊಟ್ಟಿದ್ದೆನು ಎಂದು ಹೇಳಿದ ಸಂದರ್ಭದಲ್ಲಿ ನನ್ನ, ನನ್ನ ತಂದೆಯ ಹಾಗೂ ನನ್ನ ಹೆಂಡತಿಯ ಬ್ಯಾಂಕ್ ಖಾತೆಯಲ್ಲಿ ಮೂರು ಲಕ್ಷ ರೂಪಾಯಿ ಇತ್ತಾ ಎಂದರೆ ಸಾಕ್ಷಿಯು ಚೆಕ್ ಮಾಡಬೇಕು ಎಂದು ನುಡಿಯುತ್ತಾರೆ . ಆ ಸಂದರ್ಭದಲ್ಲಿ ನಮ್ಮ ಹತ್ತಿರ ಮೂರು ಲಕ್ಷ ರೂಪಾಯಿಯ ನಿಶ್ಚಿತ ಠೇವಣಿ ಇರಲಿಲ್ಲ . ಸಾಕ್ಷಿಯು ಸ್ವತಃ ಮುಂದುವರೆದು ಹೇಳುತ್ತಾರೆ ಆ ಸಂದರ್ಭದಲ್ಲಿ ಹೆಚ್ ಡಿ ಎಫ್ ಸಿ ಬ್ಯಾಂಕಿನಲ್ಲಿ ಎಸ್ ಐ ಪಿ (Systematic Investment Plan) ಇತ್ತು ಎಂದು ನುಡಿಯುತ್ತಾರೆ. ಸದರಿ ಎಸ್ ಐ ಪಿ ಯಲ್ಲಿ ಬಡ್ಡಿಯ ದರ ವ್ಯತ್ಯಾಸ ಆಗುತ್ತಿರುತ್ತದೆ. ಆರೋಪಿಗೆ ಹಣವನ್ನು ಕೊಟ್ಟಿದ್ದೆನು ಎಂದು ಹೇಳಿದ ಸಂದರ್ಭದಲ್ಲಿ ನನ್ನ ಸದರಿ ಎಸ್ ಐ ಪಿ ಯಲ್ಲಿ 60 ರಿಂದ 70 ಸಾವಿರ ರೂಪಾಯಿ ಇದ್ದಿರಬಹುದು.

14. ಆರೋಪಿಗೆ ಕೊಟ್ಟಿದ್ದೆನು ಎಂದು ಹೇಳಿದ ಹಣವನ್ನು ಬ್ಯಾಂಕಿನಲ್ಲಿ ಇಟ್ಟರೆ ಬಡ್ಡಿ ಬರುತ್ತದೆ ಎಂಬ ಸಾಮಾನ್ಯ ಜ್ಞಾನ ನನಗೆ ಇತ್ತು ಎಂದರೆ ಸರಿ . ಆರೋಪಿಯು ನನಗೆ ಸಂಬಂಧಿಕರಲ್ಲ ಹಾಗೂ ನಮ್ಮ ಜಾತಿಯವರಲ್ಲ ಎಂದರೆ ಸರಿ . ನಾನು ಆರೋಪಿಗೆ ಕೊಟ್ಟಿದ್ದೆನು ಎಂದು ಹೇಳಿದ ಹಣವನ್ನು ಬಡ್ಡಿಗೆ ಕೊಟ್ಟಿರುವುದಿಲ್ಲ. ನನ್ನ ಮತ್ತು ಆರೋಪಿಯ ನಡುವೆ ಫೋನ್ ಮುಖಾಂತರ ಮಾತುಕತೆ ಆಗಿರುವ ಬಗ್ಗೆ ನನಗೆ ಯಾವುದೇ ಫೋನ್ ನಂಬರ ನೆನಪಿಲ್ಲ. ಆರೋಪಿಯು ನನಗೆ ಚೆಕ್ ನ್ನು ಕುಮಟಾ ಹೊಸ ಬಸ್ ನಿಲ್ದಾಣದ ಎದುರುಗಡೆ ಕೊಟ್ಟಿರುತ್ತಾರೆ. ಆ ರೀತಿ ಆರೋಪಿಯು ನನಗೆ ಚೆಕ್ ನ್ನು ಬೆಳಿಗ್ಗೆ ಸುಮಾರು 9-30 ರಿಂದ 10 ಗಂಟೆಯವರೆಗೆ ಕೊಟ್ಟಿರುತ್ತಾರೆ. ಆ ರೀತಿ ಆರೋಪಿಯು ನನಗೆ ಚೆಕ್ ಕೊಟ್ಟಿರುವುದನ್ನು ಯಾರಾದರು ನೋಡಿದ್ದಾರೋ ಇಲ್ಲವೋ ಎಂದು ನನಗೆ ಗೊತ್ತಿಲ್ಲ . ನನ್ನ ಮಾವ ಕದ್ದಿರುವ ಚೆಕ್ ನ್ನು ನನಗೆ ಕೊಟ್ಟು ಈ ಕೇಸನ್ನು ಹಾಕಿಸಿರುತ್ತಾರೆ ಎಂದರೆ ಸರಿಯಲ್ಲ . ದಿಃ 28-10-2011 ರಂದು ಆರೋಪಿಯು ತನ್ನ ಚೆಕ್ ಪುಸ್ತಕದಲ್ಲಿರುವ ಚೆಕ್ ಹಾಳೆ ಸಂಖ್ಯೆ 620206, 620209

ಹಾಗೂ 620221, ಚೆಕ್ ಗಳನ್ನು ಬಿಟ್ಟು ಉಳಿದೆಲ್ಲಾ ಚೆಕ್ ಹಾಳೆಗಳು ಕಾಣೆಯಾಗಿವೆ ಎಂದು ಪೋಲಿಸರಿಗೆ ದೂರನ್ನು ಕೊಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನಿಪಿ-1 ಚೆಕ್ ನಲ್ಲಿರುವ ಸಹಿ ಹಾಗೂ ಇತರ ಬರವಣಿಗೆಗಳ ನಡುವೆ ಸಮಯದ ಅಂತರವಿದೆ ಹಾಗೂ ಅವುಗಳನ್ನು ಏಕಕಾಲದಲ್ಲಿ ಬರೆದಿಲ್ಲ ಎಂದರೆ ನನಗೆ ಗೊತ್ತಿಲ್ಲ. ನಿಪಿ-1 ರ ಚೆಕ್ ನಲ್ಲಿರುವ ಬರವಣಿಗಳಲ್ಲಿ ವ್ಯತ್ಯಾಸ ಇದೆ ಎಂದರೆ ನನಗೆ ಗೊತ್ತಿಲ್ಲ. ನಿಪಿ-1 ರಲ್ಲಿರುವ ಬರವಣಿಗೆಗಳು ಆರೋಪಿಯ ಹಸ್ತಾಕ್ಷರದಲ್ಲಿ ಇಲ್ಲ ಎಂದರೆ ಸಾಕ್ಷಿಯು ಆರೋಪಿಯು ಸದರಿ ಚೆಕ್ ನ್ನು ನನಗೆ ಕೊಡುವಾಗ ಅದು ಬರೆದಿತ್ತು ಹಾಗೂ ಅದಕ್ಕೆ ಸಹಿ ಮಾಡಿತ್ತು ಹಾಗೂ ಅವುಗಳನ್ನು ಯಾರು ಬರೆದಿರುವುದೆಂದು ತನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ . ನಾನು ಮತ್ತು ನನ್ನ ಮಾವ ಸೇರಿಕೊಂಡು ಆರೋಪಿಯಿಂದ ಹೇಗಾದರೂ ಮಾಡಿ ಹಣ ವಸೂಲು ಮಾಡಬೇಕೆಂಬ ಉದ್ದೇಶದಿಂದ ನಿಪಿ-1 ಚೆಕ್ ನಲ್ಲಿರುವ ಬರವಣಿಗೆಯನ್ನು ಸೃಷ್ಟಿ ಮಾಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ.

15. ಮೇಲೆ ಹೇಳಿದ ಚೆಕ್ ಹಾಳೆ ಸಂಖ್ಯೆ 620206, 620209 ಹಾಗೂ 620221 ಬಿಟ್ಟು ಉಳಿದೆಲ್ಲಾ ಆರೋಪಿಯ ಚೆಕ್ ಗಳು ನನ್ನ ಹತ್ತಿರ ಇವೆ ಎಂದರೆ ಸರಿಯಲ್ಲ. ನಾನು ಆರೋಪಿಗೆ ಹಣವನ್ನು ಕೊಟ್ಟಿದ್ದೆನು ಎಂದು ಹೇಳಿದ ಕಾಲದಲ್ಲಿ ನನಗೆ ಸಾಲ ಇತ್ತೊ ಇಲ್ಲವೋ ಎಂದು ನೆನಪಿಲ್ಲ. ಈಗ ನನಗೆ ಸಾಲ ಉಂಟು. ಸದರಿ ಸಾಲ ನನ್ನ ವೈಯಕ್ತಿಕ ಸಾಲವಾಗಿರುತ್ತದೆ. ಸದರಿ ಸಾಲ ಕರ್ನಾಟಕ ಬಾಂಕ್ ,ಕುಮಟಾ ಶಾಖೆಯಲ್ಲಿದೆ. ಸದರಿ ಸಾಲವನ್ನು ನಾನು 2022 ನೇ ಇಸವಿಯಲ್ಲಿ ತೆಗೆದಿರುತ್ತೇನೆ. ಸಾಕ್ಷಿಯು ಪುನಃ ಹೇಳುತ್ತಾರೆ ಸದರಿ ಸಾಲ ತನ್ನ ಹೆಂಡತಿಯ ಹೆಸರಿನಲ್ಲಿದೆ , ಅದಕ್ಕೆ ತಾನು ಒಬ್ಬ ಜಾಮೀನುದಾರನೆಂದು . ಆರೋಪಿಗೆ ಹಣವನ್ನು ಕೊಟ್ಟಿದ್ದೆನು ಎಂದು ಹೇಳಿದ ಸಂದರ್ಭದಲ್ಲಿ ನನ್ನ ತಂದೆಯ ಹೆಸರಿನಲ್ಲಿ ಎಷ್ಟು ಸಾಲ ಇತ್ತು ಎಂದು ನನಗೆ ಗೊತ್ತಿಲ್ಲ. ಆರೋಪಿಗೆ ಹಣವನ್ನು ಕೊಟ್ಟಿದ್ದೆನು ಎಂದು ಹೇಳಿದ ಸಂದರ್ಭದಲ್ಲಿ ನನ್ನ ಹೆಂಡತಿಯ ಹೆಸರಿನಲ್ಲಿ ಯಾವುದೇ ಸಾಲ ಇರಲಿಲ್ಲ.

(ಮುಂದುವರೆದ ಪಾಟೀ ಸವಾಲು ಕೋರಿಕೆಯ ಮೇರೆಗೆ ಮುಂದೂಡಲಾಯಿತು. )

ಪಿಡಬ್ಲ್ಯೂಃ 1

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಧಾನ ಪ್ರ.ದ.ನ್ಯಾದಂ., ಕುಮಟಾ.